ಲೋಕಧ್ವನಿ

# ವಿಡಿಐಟಿ ವಿದ್ಯಾರ್ಥಿನಿಯರಿಗಾಗಿ ಕರ್ನಾಟಕ ಬ್ಯಾಂಕ್‌ನಿಂದ ವಿಶೇಷ ಬಸ್ ಸೌಲಭ್ಯ




**ಹಳಿಯಾಳ:** ಮಹಿಳಾ ಸಬಲೀಕರಣಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕರ್ನಾಟಕ ಬ್ಯಾಂಕ್ ಲಿ. ಮತ್ತು ಕೆಎಲ್‌ಎಸ್‌ವಿಡಿಐಟಿ ಕೈ ಜೋಡಿಸಿದ್ದು, ಮಹಾವಿದ್ಯಾಲಯದ ವಿದ್ಯಾರ್ಥಿನಿಯರಿಗೋಸ್ಕರ ವಿಶೇಷ ಬಸ್ ಸೌಲಭ್ಯ ನೀಡಲಾಗಿದೆ. ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಅಡಿಯಲ್ಲಿ ವಿದ್ಯಾರ್ಥಿನಿಯರಿಗಾಗಿ ವಿಶೇಷ ಬಸ್ ನೀಡಲಾಗಿದೆ.

ಕರ್ನಾಟಕ ಬ್ಯಾಂಕ್ ಉಡುಪಿ ವಿಭಾಗದ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ವಾದಿರಾಜ ಜೆ, ಕರ್ನಾಟಕ ಬ್ಯಾಂಕ್ ಲಿ. ದಾಂಡೇಲಿಯ ಶಾಖಾ ವ್ಯವಸ್ಥಾಪಕರಾದ ರಾಜೀವ್ ಕೊಪ್ಪರ್ ಹಾಗೂ ಜಯರಾಮ ಪ್ರಭು ಮಹಾ ವಿದ್ಯಾಲಯಕ್ಕೆ ಆಗಮಿಸಿ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂಧರ್ಭ ದಲ್ಲಿ ಹೊಸ ಬಸ್ ನ್ನು ಹಸ್ತಾಂತರಿಸಿದರು. ಮಹಾವಿದ್ಯಾಲಯವು ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ಪಿಂಕ್ ಬಸ್ ಸೌಲಭ್ಯವನ್ನು ನೀಡಿದ್ದು, ಕರ್ನಾಟಕ ಬ್ಯಾಂಕ್ ನ ಈ ಕೊಡುಗೆ ವಿದ್ಯಾರ್ಥಿನಿಯರ ಸಾರಿಗೆ ಸಂಚಾರಕ್ಕೆ ಇನ್ನಷ್ಟು ಅನುಕೂಲ ಮಾಡಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಹೇಳಿದ್ದಾರೆ.